ಹೆಂಡತಿ ಅಜಮ್ಮ, ಅವ್ವ ಮಾಳವ್ವನಷ್ಟೇ ಸಂಸಾರವನ್ನು ಸಲೀಸಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದುದರಿಂದ ಅಪ್ಪ ಅವ್ವನ ಸಾವಿನಿಂದ ದಿಕ್ಕೆಟ್ಟಿದ್ದ ಗದ್ದಿಗ್ಯಪ್ಪ ಮೆಲ್ಲಗೆ ಚೇತರಿಸಿಕೊಳ್ಳತೊಡಗಿದ್ದ. ಹೊಲ ಬದುಕಿನ ಬಗ್ಗೆ ಮೂಡಿದ್ದ ನಿರಾಸಕ್ತಿ ಕ್ರಮೇಣ ಕರಗತೊಡಗಿತ್ತು. ಆದರೂ ಮುಂಚಿನ ಲವಲವಿಕೆ ಕಾಣದೆ ಒಂಥರಾ ಮಂಕಾಗಿರುತ್ತಿದ್ದ ಗದ್ದಿಗ್ಯಪ್ಪನಿಗೆ ಅದನ್ನು ನಿವಾರಿಸಿಕೊಳ್ಳುವ ಸಲುವಾಗಿ ಊರಿನ ದೇವಸ್ಥಾನದಲ್ಲಿ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ನಡೆಯುತ್ತಿದ್ದ ಭಜನೆ, ತತ್ವಪದಗಳ ಸಂಗಕ್ಕೆ ಬಿದ್ದಿದ್ದ. ಹಿಂಗೆ ಅವುಗಳ ಜಾಡಿಗೆ ಬಿದ್ದ ಗದ್ದಿಗ್ಯಪ್ಪ ಕೆಲವು ತಿಂಗಳುಗಳು ಕಳೆಯುವುದರೊಳಗೆ ಖುದ್ದು ತಾನೂ ಅವುಗಳನ್ನು ಕಲಿತು ಹಾಡುವ ಗುಂಪಿನಲ್ಲಿ ಒಂದಾಗಿ ಹೋಗಿದ್ದ. ಆ ಗುಂಪು ತನ್ನ ಊರಿನಲ್ಲಿ ಮಾತ್ರ ಹಾಡದೆ ಅಕ್ಕ ಪಕ್ಕದ ಊರುಗಳಿಗೂ ಹೋಗುತ್ತಿತ್ತು. ಆಗ ಗದ್ದಿಗ್ಯಪ್ಪನೂ ತಪ್ಪದೇ ಹೋಗುತ್ತಿದ್ದ. ಒಮ್ಮೆ ಹಿಂಗೆ ಪಕ್ಕದೂರಿಗೆ ಭಜನೆಗೆಂದು ಹೋಗಿದ್ದಾಗ ರಾಮಣ್ಣನ ಪರಿಚಯವಾಗಿತ್ತು. ಆ ಪರಿಚಯ ಗದ್ದಿಗ್ಯಪ್ಪನ ಬದುಕಿನ ಗತಿಯನ್ನೇ ಬದಲಿಸಿಬಿಟ್ಟಿತ್ತು.

ಅದು ಭೂದಾನ ಚಳವಳಿಯ ಕಾವಿದ್ದ ಕಾಲ. ಗಾಂಧಿ ಮತ್ತು ವಿನೋಬಾ ಭಾವೆಯವರ ಪ್ರಭಾವಕ್ಕೊಳಗಾಗಿದ್ದ ರಾಮಣ್ಣ ಮದುವೆಯನ್ನೂ ಆಗದೆ ಇದ್ದಬದ್ದ ಆಸ್ತಿಯನ್ನೆಲ್ಲಾ ನಿರ್ಗತಿಕರಿಗೆ ದಾನ ಮಾಡಿಬಿಟ್ಟಿದ್ದ. ಸಾಲದ್ದಕ್ಕೆ ಭೂದಾನ ಚಳವಳಿಗಾಗಿ ಹಾಗೂ ಆ ಬಗ್ಗೆ ಭೂ ಮಾಲೀಕರ ಮನವೊಲಿಕೆಗಾಗಿ ತನ್ನಿಡೀ ಬದುಕನ್ನೇ ಮುಡುಪಾಗಿಟ್ಟುಬಿಟ್ಟಿದ್ದ. ಹಂಗಾಗಿ ಹಳ್ಳಿ ಹಳ್ಳಿಗಳಿಗೆ ಹೋಗಿ ಭೂದಾನ ಮಾಡಲು ಮನವೊಲಿಸುವ ಯತ್ನದಲ್ಲಿ ತೊಡಗಿದ್ದ. ಆರಡಿಗಿಂತಲೂ ಕೊಂಚ ಎತ್ತರಕ್ಕಿದ್ದ, ಸಪೂರ ದೇಹದ, ಸದಾ ತುಂಬು ತೋಳಿನ ಖಾದಿ ಜುಬ್ಬ ಹಾಗೂ ಪೈಜಾಮನ್ನು ತೊಡುತ್ತಿದ್ದ, ಉದ್ದನೆಯ ತಲೆಗೂದಲನ್ನು ಹಿಂದಕ್ಕೆ ವಪ್ಪವಾಗಿ ಬಾಚಿಕೊಳ್ಳುತ್ತಿದ್ದ, ಜೊತೆಗೆ ಮುಖದಲ್ಲಿ ಸದಾ ನಗು ತುಂಬಿರುತ್ತಿದ್ದ ರಾಮಣ್ಣನನ್ನು ನೋಡುತ್ತಲೇ ಗದ್ದಿಗ್ಯಪ್ಪನೊಳಗೆ ಒಂಥರಾ ಪೂಜ್ಯ ಭಾವವೊಂದು ಬೆಳೆದುಬಿಟ್ಟಿತ್ತು. ಈ ಭಾವ ಮುಂದೆ ಬರಬರುತ್ತಾ ಅಪಾರ ಸ್ನೇಹಕ್ಕೆ ತಿರುಗಿ ರಾಮಣ್ಣ ಅತ್ತ ಬಂದಾಗಲೆಲ್ಲಾ ಗದ್ದಿಗ್ಯಪ್ಪನ ಮನೆಯಲ್ಲೇ ಉಳಿಯುತ್ತಿದ್ದ. ಲೋಕವೆಲ್ಲಾ ದುರಾಸೆಯ ಕೂಪದಲ್ಲಿ ಬಿದ್ದು ಹೊರಳಾಡುತ್ತಿರುವಾಗ ರಾಮಣ್ಣನ ತ್ಯಾಗ ಗದ್ದಿಗ್ಯಪ್ಪನನ್ನು ಮೂಕನನ್ನಾಗಿಸಿತ್ತು. ತನಗಿದ್ದ ಬರೋಬ್ಬರಿ ಇಪ್ಪತ್ತು ಎಕರೆ ಜಮೀನನ್ನು ಅಂಗೈಯಗಲದಷ್ಟೂ ಉಳಿಸಿಕೊಳ್ಳದೆ ದಾನ ಮಾಡಿ ಇತರರನ್ನೂ ಅದಕ್ಕಾಗಿ ಉತ್ತೇಜಿಸುತ್ತಿದ್ದ ರಾಮಣ್ಣ ಗದ್ದಿಗ್ಯಪ್ಪನಿಗೆ ತುಂಬಾ ದೊಡ್ಡ ಮನುಷ್ಯನಂತೆ ಕಾಣುತ್ತಿದ್ದನಲ್ಲದೆ, ಆಟಲ್ಲದಿದ್ದರೂ ಈಟಾದರೂ ತಾನೂ ಅದಕ್ಕೆ ಕೈ ಜೋಡಿಸಬೇಕೆಂಬ ತುಡಿತಕ್ಕೂ ಬಿದ್ದಿದ್ದ.

ಮದುವೆಯಾದ ನಾಲ್ಕು ವರ್ಷಕ್ಕೆ ಹುಟ್ಟಿದ ಮಗನಿಗೆ ಗಾಂಧಿ ಅಂತ ಹೆಸರಿಟ್ಟಾಗ ಗದ್ದಿಗ್ಯಪ್ಪ ಒಂದಷ್ಟು ದಿನ ಊರವರ ಬಾಯಿಗೆ ತಮಾಷೆಯ ವಸ್ತುವಾಗಿದ್ದ. 'ಇವ್ನು ಹೆಸ್ರಿಟ್ಟರೋದ ನೋಡ್ರೋ, ಈಗ ಮಗ ಹುಟ್ಟಿದ್ದಕ್ಕೆ ಗಾಂಧಿ, ಮುಂದ್ಕೆ ಮಗ್ಳೇನಾರಾ ಹುಟ್ಟಿದ್ರೆ ಏನಂತ ಇಡ್ತಾನೋ' ಅಂತ ಮಾತಾಡಿಕೊಂಡಿದ್ದರು. ಗದ್ದಿಗ್ಯಪ್ಪ ಅವರ ಯಾವ ವ್ಯಂಗ್ಯದ ಮಾತುಗಳಿಗೂ ತಲೆಕೆಡಿಸಿಕೊಂಡಿರಲಿಲ್ಲ. ಗಾಂಧಿ ಹೈಸ್ಕೂಲಿಗೆ ಹೋಗುವಂಥ ಹೊತ್ತಲ್ಲಿ ನಡೆಯಬಾರದ ಸಂಗತಿಯೊಂದು ನಡೆದುಹೋಗಿತ್ತು. ಒಂದು ಬೇಸಿಗೆಯ ರಜೆಯಲ್ಲಿ ಅವ್ವ ಅಜಮ್ಮನ ತವರು ಮನೆಗೆ ಹೋಗಿದ್ದ. ಆಗಾಗ ಅಲ್ಲಿಗೆ ಹೋಗುತ್ತಿದ್ದುದರಿಂದ ಆ ಊರಿನಲ್ಲೂ ಗಾಂಧಿಗೆ ಕೆಲವರು ಗೆಳೆಯರಾಗಿದ್ದರು. ಹಂಗೆ ಗೆಳೆಯನಾದ ಒಬ್ಬನ ಮನೆಗೆ ಹೋದಂಥ ಹೊತ್ತಲ್ಲಿ ಗಾಂಧಿಗೆ ಆ ಮನೆಯ ಮೂಲೆಯೊಂದರಲ್ಲಿ ನಿಲ್ಲಿಸಿದ್ದ ನಾಡ ಕೋವಿಯೊಂದು ಕಣ್ಣಿಗೆ ಬಿದ್ದಿತ್ತು. ಅದನ್ನವರು ಹಬ್ಬ ಹುಣ್ಣಿಮೆಗಳಲ್ಲಿ ಹಂದಿ ಹಾಗೂ ಮೊಲಗಳ ಬೇಟೆಗೆಂದು ಉಪಯೋಗಿಸುತ್ತಿದ್ದರು.

ಅವತ್ತು ಸಂಜೆಯನ್ನು ಮೃಗಾಕಿಕೊಂಡು ಬೇಟೆಗೆ ಹೋಗುವುದೆಂದು ತೀರ್ಮಾನವಾಗಿತ್ತು. ಹಂಗಾಗಿ ಮನೆಯವರು ಕೋವಿಗೆ ಮದ್ದು ತುಂಬಿಸಿ ಇನ್ನೇನು ಇಷ್ಟರಲ್ಲೇ ಹೊರಡುವುದಲ್ಲವಾ ಅಂದುಕೊಂಡು ಎಂದಿನಂತೆ ಕೋವಿಯನ್ನು ಅದರ ಮಾಮೂಲಿ ಜಾಗವಾದ ತೊಲೆಗೆ ನೇತಾಕದೆ ಮೂಲೆಯೊಂದರಲ್ಲಿ ಇಟ್ಟಿದ್ದರು. ಅಂದು ಸಂಜೆ ಗೆಳೆಯರೊಂದಿಗೆ ಅದೂ ಇದೂ ಆಟವಾಡಿಕೊಂಡಿದ್ದ ಗಾಂಧಿ ಅಕಸ್ಮಾತ್ತಾಗಿ ಆ ಗೆಳೆಯನ ಮನೆಗೆ ಹೋಗಿದ್ದ. ಆಗವನಿಗೆ ಆ ಬಂದೂಕು ಕಣ್ಣಿಗೆ ಬಿದ್ದದ್ದೇ ತಡ, ಅದನ್ನು